ಸುಸ್ತಾದದ್ದಕ್ಕೋ? ಗಾಳಿಯಲ್ಲಿ ತೇಲಿಸಲಾಗದ ಸೋಲಿಗೋ? ಆ ಹುಡುಗ ನಿಂತುಬಿಟ್ಟಿದ್ದ. ಪುಟ್ಟ ಹುಡುಗಿಗೆ ಅಳುವೇ ಬಂದಿರಬೇಕು; ಕಣ್ಣು ಒರೆಸಿಕೊಳ್ಳುತ್ತಿದ್ದಳು.

ತನಗೆ ಸಂಬಂಧಿಸಿದ್ದೇ ಅಲ್ಲ ಎನ್ನುವಂತೆ ನೋಡುತ್ತಿದ್ದ ಮನೋಹರನಿಗೆ ಅವರ ಸಂಕಟದಲ್ಲಿ ತನ್ನದೂ ಪಾಲಿದೆ ಅನ್ನಿಸಿತು. ಅವರ ಬಳಿಗೆ ಹೋಗಿ ಆ ಪಟವನ್ನ ಎತ್ತಿಹಿಡಿದು ಅವರನ್ನ ಸಂತೈಸಿದ. 'ಇದಕ್ಕೆಲ್ಲ ಯಾಕೆ ಬೇಜಾರು? ಪಟ ಹಾರಿಸೋದು ನಿಮಗೆ ಹೊಸದು, ನಿಧಾನ ಕಲೀಬೇಕು. ಇಕಾ ನಾನು ತೋರಿಸಿಕೊಡ್ತೆ' ಎಂದು ಸಾಕಷ್ಟು ಉದ್ದದ ದಾರವನ್ನಷ್ಟೇ ಹಿಡಿದು ಬಯಲಿನ ಅಂಚಿನಿಂದ ಮೆಲ್ಲಗೆ ಓಡುತ್ತ ಬಂದ. ಕೊಂಚ ದೂರ ನೆಲದಲ್ಲಿ ತೆವಳಿದ ಪಟ ಹಾಗೇ ಸ್ವಲ್ಪ ಮೇಲೆದ್ದಿತು. ಒಂದಿಷ್ಟು ದೂರ ಬಂದ ನಂತರ ಮತ್ತು ಬಂದವರಂತೆ ತೊನೆಯುತ್ತ, ಅತ್ತಿತ್ತ ಸರಿದಾಡುತ್ತ ಮತ್ತಷ್ಟು ಮೇಲೆ ನೆಗೆಯಿತು. ಬೀಸುವ ಗಾಳಿಯನ್ನ ತನ್ನ ಕೆಳಗೆ ಪಡೆದುಕೊಂಡ ಪಟ ಕೊಂಚ, ಕೊಂಚ ಮೇಲೇರಿದಂತೆಲ್ಲ ಮನೋಹರ ಕೈಯಲ್ಲಿದ್ದ ದಾರವನ್ನ ಬಿಟ್ಟುಕೊಡುತ್ತ ಬಂದ. ನೋಡ ನೋಡುತ್ತಿದ್ದಂತೆ ಮತ್ತಷ್ಟು ದಾರವನ್ನು ಪಡೆದುಕೊಳ್ಳುತ್ತ ನೆಲದ ಹಂಗನ್ನು ತೊರೆದು ಹಗುರವಾಗಿ ಮೇಲೆಮೇಲಕ್ಕೆ ಹಾರುತ್ತ, ದೂರವಾಗತೊಡಗಿತು.

ಗಾಳಿಪಟ ಹಾರಿಸುವ ಸವಾಲು, ಆ ಮಕ್ಕಳ ಕೊರಗು ತೊಡೆಯುವ ಅನಿವಾರ್ಯತೆಯ ಈ ಗೌಜಿಯಲ್ಲಿ ಮನೋಹರನನ್ನ ಬಾಧಿಸುತ್ತಿದ್ದ ಖಿನ್ನತೆ, ವಿಷಾದಭಾವವೆಲ್ಲ ಮಾಯವಾಗಿತ್ತು. ಕಳೆದುಕೊಂಡ ಉತ್ಸಾಹ, ಚೈತನ್ಯಗಳೆಲ್ಲ ಅವನಿಗೆ ಅರಿವಿಲ್ಲದಂತೆ ತುಂಬತೊಡಗಿತು. ಬದುಕಬೇಕಾದ ಅನಿವಾರ್ಯತೆ, ಅದಕ್ಕೆ ಅಗತ್ಯವಾದ ಕುಶಲತೆ ಎಷ್ಟು ಮುಖ್ಯ ಎನ್ನುವದನ್ನ ಪಟ ಹಾರಿಸುತ್ತಲೇ ಅವನಿಗೆ ಮನವರಿಕೆಯಾಗತೊಡಗಿತು. ಬದುಕಿನಲ್ಲಿ ಅಗಣಿತ ವಿಸ್ತಾರದ ಅವಕಾಶವಿರುವಾಗ ತಾನು ಸಣ್ಣದೊಂದು ಸಂಗತಿಗೆ ಕುಸಿದುಬಿಟ್ಟೆ ಎನ್ನುವದೆಲ್ಲ ಅವನ ಮನಸ್ಸಿಗೆ ನಾಟುತ್ತಿತ್ತು. ನೆಲದ ಮೇಲಿನ ನನಗೂ, ಅಂತರಿಕ್ಷದಲ್ಲಿ ಈಜುವ ಪಟಕ್ಕೂ ಇರುವ ಸಂಬಂಧವೆಂದರೆ ಈ ಕಿರಿದಾದ ದಾರ ಮಾತ್ರ. ತಾನೂ ಗಾಳಿಪಟದಂತೆ ಹಗುರವಾಗಬೇಕು ಎಂದುಕೊಳ್ಳುತ್ತ ಗಾಳಿಪಟದ ದಾರದುಂಡೆಯನ್ನ ಹುಡುಗನ ಕೈಗೆ ಕೊಟ್ಟ.

ಅಷ್ಟೆತ್ತರದ ದೂರದಲ್ಲಿ ಕ್ಷಣಕ್ಷಣಕ್ಕೆ ಚಿಕ್ಕದಾಗುತ್ತ, ದೂರವಾಗುತ್ತ, ನಿಶ್ಚಲವಾಗಿ ಕಂಡರೂ ಚಲಿಸುತ್ತಲೇ ಇರುವ ಗಾಳಿಪಟವನ್ನ ತಾನೇ ಹಾರಿಸುತ್ತಿರುವದು ಎನ್ನುವ ಉಲ್ಲಾಸದಲ್ಲಿ ಹುಡುಗನ ಮುಖ ಅರಳಿಕೊಂಡಿತು. ಅವನ ಪಕ್ಕ ಆ ಪುಟ್ಟ ಹುಡುಗಿ ಕೈ ತಟ್ಟಿ ಕುಣಿಯುತ್ತಿದ್ದಳು.


## ಗಂಗಾಧರ ಕೊಳಗಿ

ಕೃಷಿಕ ಮತ್ತು ಪತ್ರಕರ್ತ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದವರು. 'ಸಮಯದ ನಿಜ' (ಕೃಷಿ ಮತ್ತು ರಂಗಭೂಮಿಗೆ ಸಂಬಂಧಿಸಿದ ವಿಶೇಷ ಲೇಖನಗಳ ಸಂಗ್ರಹ), 'ಮನಸು ಆಕಾಶದ ನೀಹಾರಿಕೆ' (ಕಥಾಸಂಕಲನ), 'ಕಾಡಂಚಿನ ಕಥೆಗಳು' (ಪ್ರಬಂಧ ಸಂಕಲನ), 'ಗಾಂಜಾ ಗ್ಯಾಂಗ್, ಕತ್ತಲೆ ಕಾನು' (ಕಾದಂಬರಿ)–ಪುಸ್ತಕಗಳು ಪ್ರಕಟಗೊಂಡಿವೆ. ಪ್ರಯೋಗ ಸ್ವಯಂಸೇವಾ ಸಂಸ್ಥೆಯ ಮೂಲಕ ಸಾಹಿತ್ಯ, ರಂಗಭೂಮಿ, ಪರಿಸರ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ.